ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417104.

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmtech@cescmysore.org

Company Identity Number[CIN]:- **U40109KA2004SGC035177**

ಪ್ರ.ವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-1/ಸಿ1-2003/2020-21/ Cys-792 ದಿನಾಂಕ: 29 SEP 2020
ಲಗತ್ತು :

## ಅಧಿಕೃತ ಜ್ಞಾಪನಾ

ವಿಷಯ: 2020-21 ನೇ ಸಾಲಿನ ಬಂಡವಾಳ ಕಾಮಗಾರಿಗಳಿಗೆ CAPEX ಬಜೆಟ್ ಹಂಚಿಕೆಯ ಬಗ್ಗೆ.

ಉಲ್ಲೇಖ: 1. 2020-21 ನೇ ಸಾಲಿನ ಬಂಡವಾಳ ಕಾಮಗಾರಿಗಳಿಗೆ ಮೊದಲನೇ ಮಧ್ಯಂತರ ಬಜೆಟ್ ಹಂಚಿಕೆ ಬಗ್ಗೆ ಈ ಕಛೇರಿ ಪತ್ರ ಸಂಖ್ಯೆ: ಪ್ರ.ವ್ಯ(ತಾ)/ಉಪ್ರವ್ಯ(ತಾ)/ ಸಪ್ರವ್ಯ(ತಾ)-1/ಸಿ1-2003/2020-21/ಸಿವೈಎಸ್-180 ದಿನಾಂಕ: 15.05.2020

2. 2020-21ನೇ ಸಾಲಿನ ಬಂಡವಾಳ ಕಾಮಗಾರಿಗಳಿಗೆ ಎರಡನೇ ಮಧ್ಯಂತರ ಬಜೆಟ್ ಹಂಚಿಕೆ ಬಗ್ಗೆ ಈ ಕಛೇರಿ ಪತ್ರಸಂಖ್ಯೆ: ಪ್ರ.ವ್ಯ(ತಾ)/ಉಪ್ರವ್ಯ(ತಾ)/ ಸಪ್ರವ್ಯ(ತಾ)-1/ ಸಿ1-2003/2020-21/ಸಿವೈಎಸ್-504 ದಿನಾಂಕ: 23.07.2020
3. ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು ರವರ ಪತ್ರ ಸಂಖ್ಯೆ: ಮುಇಂ(ವಿ)/ಅಇಂ(ವಿ)/ಸಕಾಇಂ-3/2020-21/ಸಿವೈಎಸ್-68, ದಿನಾಂಕ: 14.07.2020
4. ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಹಾಸನ ರವರ ಪತ್ರ ಸಂಖ್ಯೆ: 871-73, ದಿನಾಂಕ: 02.07.2020
5. ದಿನಾಂಕ: 04.08.2020 ರಂದು ನಡೆದ 79ನೇ ಮಂಡಳಿ ಸಭೆಯ ಠರಾವು ಸಂಖ್ಯೆ: 79/08 ರಲ್ಲಿನ ಅನುಮೋದನೆ.
6. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಮೈಸೂರು ರವರ ಪತ್ರ ಸಂಖ್ಯೆ: 914-20, ದಿನಾಂಕ: 16.05.2020
7. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಮಂಡ್ಯ ರವರ ಪತ್ರ ಸಂಖ್ಯೆ: 2864, ದಿನಾಂಕ: 02.09.2020
8. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಹಾಸನ ರವರ ಪತ್ರ ಸಂಖ್ಯೆ: 1331-36, ದಿನಾಂಕ: 09.09.2020
9. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ಚಾ.ನಗರ-ಕೊಡಗು ವೃತ್ತ, ರವರ ಪತ್ರ ಸಂಖ್ಯೆ: 2034-37, ದಿನಾಂಕ: 09.09.2020
10. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಪ್ರ.ವ್ಯ(ತಾ)/ಉಪ್ರವ್ಯ(ತಾ)/ ಸಪ್ರವ್ಯ(ತಾ)-1/ ಸಿ1-2003/2020-21/ಸಿವೈಎಸ್-724 ದಿನಾಂಕ: 07.09.2020
11. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದಿತ ಟಿಪ್ಪಣಿ ದಿನಾಂಕ: 29.09.2020

****

2020-21ನೇ ಸಾಲಿನ ಬಂಡವಾಳ CAPEX ಕಾಮಗಾರಿಗಳಿಗೆ 79ನೇ ಮಂಡಳಿ ಸಭೆಯಲ್ಲಿ ರೂ. 835.50 ಕೋಟಿಗಳ ಬಂಡವಾಳ ಪ್ರಸ್ತಾವನೆಗೆ ಉಲ್ಲೇಖ-(5)ರಲ್ಲಿ ಮಾನ್ಯ ಕ.ವಿ.ನಿ. ಆಯೋಗದ ಅನುಮೋದನೆಗೆ ಒಳಪಟ್ಟಂತೆ ಅನುಮೋದನೆ ದೊರೆತಿರುತ್ತದೆ. ಮಂಡಳಿಯ ನಿರ್ದೇಶನದಂತೆ ಎಲ್ಲಾ ಬಂಡವಾಳ ಕೆಲಸಗಳಿಗಾಗಿ ಶೀರ್ಷಿಕೆವಾರು ನಿಗಮ ವ್ಯಾಪ್ತಿಯ ಎಲ್ಲಾ ಕಾರ್ಯ ಮತ್ತು ಪಾಲನಾ ವೃತ್ತ ಮತ್ತು ವಿಭಾಗಗಳಿಗೆ CAPEX ಬಜೆಟ್‌ನ್ನು ಹಂಚಿಕೆಮಾಡಲಾಗಿದ್ದು (ಅನುಬಂಧ- 1, 2, 3, 4) ಕಾಮಗಾರಿವಾರು ಪಟ್ಟಿಯನ್ನು (ಅನುಬಂಧ-A, B, C, D) ಲಗತ್ತಿಸಲಾಗಿದೆ. ವಿಭಾಗಾವಾರು ಲಗತ್ತಿಸಲಾಗಿರುವ ಕಾಮಗಾರಿ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತವು ಹಂಚಿಕೆ ಮಾಡಲಾಗಿರುವ ಬಜೆಟ್ ಮಿತಿಗೆ ಒಳಪಟ್ಟಿರುತ್ತದೆ. ಎಲ್ಲಾ ಸಕ್ಷಮ ಕಾರ್ಯ ಮತ್ತು ಪಾಲನಾ ಅಧಿಕಾರಿಗಳು ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಂಡು ನಿಗಮದ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

1. 2020-21 ರಲ್ಲಿ ಪ್ರಸ್ತಾವಿತ ಹೊಸ ಕೆಲಸಗಳನ್ನು ತೆಗೆದುಕೊಳ್ಳುವ ಮುಂಚೆ, 2019-20 ರ ಹಾಗೂ ಹಿಂದಿನ ವರ್ಷಗಳಲ್ಲಿರುವ ಅಪೂರ್ಣಗೊಂಡ ಕೆಲಸಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವುದು.
2. 2020-21ನೇ ಸಾಲಿನ ಬಜೆಟ್ ನಲ್ಲಿ ಅನುಮೋದಿಸಿರುವ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳುವುದು ಹೆಚ್ಚಿನ ಕಾಮಗಾರಿ ಅಥವಾ ಕಾಮಗಾರಿಗಳ ಬದಲಾವಣೆ ಬೇಕಾದಲ್ಲಿ ನಿಗಮ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಿ ಅನುಮೋದನೆಗೊಂಡ ನಂತರ ಕಾರ್ಯ ಕೈಗೊಳ್ಳುವುದು.

3. 2020-21 ರ ಬಂಡವಾಳ ಕಾಮಗಾರಿಗಳಿಗೆ ಬಜ್ಜೆಟ್ ಹಂಚುವ ವೇಳೆಯಲ್ಲಿ ಸಲ್ಲಿಸಿರುವ ಬಾಕಿ ಇರುವ ಕಾಮಗಾರಿಗಳನ್ನು (Spillover Works) ಮಾತ್ರ ಗಣನೆಗೆ ತೆಗೆದುಕೊಂಡು ಪೂರ್ಣಗೊಳಿಸಲು ಕ್ರಮವಹಿಸುವುದು ಹಾಗೂ ಅವುಗಳ ವಸ್ತುಸ್ಥಿತಿಯನ್ನು ಪ್ರತಿ ಮಾಹೆ ಸಮುಚಿತ ಮಾರ್ಗದಲ್ಲಿ ನಿಗಮ ಕಛೇರಿಗೆ ಸಲ್ಲಿಸುವುದು.

4. ಬಜ್ಜೆಟ್‌ನ್ನು ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡಲು ಉಪಯೋಗಿಸಬಹುದು.

5. ಉಲ್ಲೇಖ (1)ರಲ್ಲಿ ರೂ. 50.90 ಕೋಟಿ ಮೊದಲನೆಯ ಹಾಗೂ ಉಲ್ಲೇಖ (2)ರಲ್ಲಿ ರೂ. 103.45 ಕೋಟಿ ಎರಡನೆಯ ಮಧ್ಯಂತರ ಬಂಡವಾಳ ಬಜ್ಜೆಟ್‌ನಲ್ಲಿ ನೀಡಿರುವ ಶೀರ್ಷಿಕೆವಾರು ಅನುದಾನವು ಅನುಬಂಧದಲ್ಲಿನ ಶೀರ್ಷಿಕೆವಾರು ನೀಡಿರುವ ಅಂತಿಮ ಬಜ್ಜೆಟ್‌ನಲ್ಲಿ ಸೇರಿರುತ್ತದೆ. ಒಟ್ಟು ಶೀರ್ಷಿಕೆವಾರು ಅನುದಾನವು ಅನುಬಂಧದಲ್ಲಿ ನಮೂದಿಸಿರುವ ಬಜ್ಜೆಟ್ ಅನ್ನು ಖಚಿತ ಪಡಿಸಿಕೊಳ್ಳುವುದು ಹಾಗೂ ತದನಂತರ ಸೂಕ್ತ ಕ್ರಮವಹಿಸುವುದು.

6. SCSP ಮತ್ತು TSP ಶೀರ್ಷಿಕೆ ಅಡಿಯಲ್ಲಿ ಮಂಜೂರು ಮಾಡಿಕೊಂಡ ಕಾಮಗಾರಿಗಳನ್ನು ಆದ್ಯತೆ ಮೇಲೆ ತೆಗೆದುಕೊಂಡು, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸುವುದು ಹಾಗೂ ಕಾಮಗಾರಿಗಳ ಪ್ರಗತಿ ಹಾಗೂ ಖರ್ಚಿನ ತಾಲ್ಲೂಕುವಾರು ವಿವರಗಳನ್ನು ಪ್ರತಿ ಮಾಹೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

7. SDP ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳನ್ನು ಆದ್ಯತೆ ಮೇಲೆ ತೆಗೆದುಕೊಂಡು, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸುವುದು ಹಾಗೂ ಕಾಮಗಾರಿಗಳ ಪ್ರಗತಿ ಹಾಗೂ ಖರ್ಚಿನ ತಾಲ್ಲೂಕುವಾರು ವಿವರಗಳನ್ನು ಪ್ರತಿ ಮಾಹೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

8. ಯಾವುದೇ ಶೀರ್ಷಿಕೆಯಡಿ ನಿಗದಿತ ಬಜ್ಜೆಟ್ ಮೀರಿದಲ್ಲಿ ಹೆಚ್ಚುವರಿ ಬಜ್ಜೆಟ್ ಮೊತ್ತಕ್ಕೆ/ಮರು ಹೊಂದಾಣಿಕೆಗೆ ಸದರಿ ಶೀರ್ಷಿಕೆಯಡಿ ನೀಡಿದ ಬಜ್ಜೆಟ್ ಸಂಪೂರ್ಣವಾಗಿ ಉಪಯೋಗಿಸಿರುವ ವಿವರವನ್ನು ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ ಕಛೇರಿಯವರ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ನಿಗಮ ಕಛೇರಿಗೆ ಸಲ್ಲಿಸಿ, ಅನುಮೋದನೆ ಪಡೆಯತಕ್ಕದ್ದು.

9. ಮಂಜೂರಾದ ಎಲ್ಲಾ ಕಾಮಗಾರಿಗಳನ್ನು ಹಾಲಿ ಚಾಲ್ತಿಯಲ್ಲಿರುವ ನಿಗಮದ ನಿಬಂಧನೆಗೊಳಪಟ್ಟು ಸೂಕ್ತ ಕ್ರಮವಹಿಸುವುದು.

10. ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ CAPEX GUIDELINES ನಿರ್ದೇಶನದಂತೆ ರೂ. 5.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳನ್ನು Prudence Check ಪರಿಮಿತಿಯಲ್ಲಿ ನಿರ್ವಹಿಸುವುದು.

11. ಯೋಜನೆಗಳಿಗೆ ಸಂಬಂಧಿಸಿದಂತೆ ಅನುಬಂಧದಲ್ಲಿನ ಕ್ರಮ ಸಂಖ್ಯೆ 10 ರಿಂದ 14 ರ ವರೆಗೆ ಯೋಜನಾ ಶಾಖೆಗೆ ಕಾಮಗಾರಿವಾರು ಬಜ್ಜೆಟ್ ಹಂಚಲಾಗಿದ್ದು, ವಿಭಾಗವಾರು ಅವಶ್ಯಕತೆಗಳನ್ವಯ ಯೋಜನಾ ಶಾಖೆಯಿಂದ ಬಜ್ಜೆಟ್ ಪಡೆಯುವುದು.

29/9/20

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

ಪ್ರತಿಗಳು :

1. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
3. ನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವಲಯ, ಚಾ.ವಿ.ಸ.ನಿ.ನಿ, ಮೈಸೂರು/ ಹಾಸನ.
4. ಪ್ರಧಾನ ವ್ಯವಸ್ಥಾಪಕರು, ಖರೀದಿ/ಯೋಜನೆ/ವಾಣಿಜ್ಯ/ಲೆಕ್ಕಗಳು, ಚಾ.ವಿ.ಸ.ನಿ.ನಿ. ಮೈಸೂರು
5. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ. ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
7. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/ ಸಿವಿಲ್/ ಬಿ&ಆರ್/ಎ&ಆರ್/ಡಿ.ಎಸ್.ಎಂ/ಟಿ.ಎ.ಕ್ಯೂ.ಸಿ-1/ ಟಿ.ಎ.ಕ್ಯೂ.ಸಿ-2, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
9. ಉಪ ಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಎಲ್ಲಾ ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ವಲಯ/ ವಿಭಾಗ, ಚಾವಿಸನಿನಿ.
13. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ / ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ಗಮನಕ್ಕೆ ತರಲು ಕೋರಲಾಗಿದೆ.

ಮುಖ್ಯ ಕಡತ/ಕಛೇರಿ ಪ್ರತಿ